# ಸ್ವಾಮಿ ಧೀರೇಶಾನಂದ (೧೯೦೭-೧೯೯೮)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಭಾಗ ೪

ಅನುವಾದ: **ಕುಮಾರಿ ಪಿ. ಉಷಾ**

**೧.೧೦.೧೯೭೭, ಕಾಶಿ ಸೇವಾಶ್ರಮ. ೧೦ನೇ ನಂಬರ್ ವಾರ್ಡ್**


ಬೆಳಗಿನ ಉಪಾಹಾರದ ಬಳಿಕ ನಾನು ಧೀರೇಶಾನಂದರ ಕೋಣೆಗೆ ಹೋದೆ. ಅವರು ಯಾವಾಗಲೂ ಹಾಸಿಗೆಯಲ್ಲಿ ಕುಳಿತು ಧ್ಯಾನಜಪವನ್ನೂ, ಅಧ್ಯಯನವನ್ನೂ ಮಾಡುತ್ತಿದ್ದರು. ಕೋಣೆಯ ತುಂಬ ಪುಸ್ತಕಗಳು. ಸಾಧನೆ-ಭಜನೆ ಹಾಗೂ ಭಗವತ್ಕೃಪೆಗೆ ಸಂಬಂಧಿಸಿದ ನನ್ನ ಪ್ರಶ್ನೆಗಳಿಗೆ ಉತ್ತರಿಸುತ್ತ ಹೇಳಿದರು, ''ನೋಡು ನಾಲ್ಕು ಬಗೆಯ ಕೃಪೆ ಇವೆ: ಗುರುಕೃಪೆ, ಈಶ್ವರ ಕೃಪೆ, ಶಾಸ್ತ್ರ ಕೃಪೆ ಹಾಗೂ ಆತ್ಮಕೃಪೆ. ಗುರುಗಳು ಕೃಪೆಗೈದು ದೀಕ್ಷೆಯನ್ನು ನೀಡಿ ಸಾಧನ-ಪಥವನ್ನು ತೋರುತ್ತಾರೆ. ಶಿಷ್ಯನ ಸೇವಾ-ಶುಶ್ರೂಷೆಗಳಿಂದ ಪ್ರಸನ್ನರಾಗಿ, ಗುರುಗಳು ತತ್ತ್ವೋಪದೇಶವನ್ನು ನೀಡುವರು. ಇದೇ ಗುರುಕೃಪೆ.

''ಶ್ರದ್ಧೆ-ಪ್ರೇಮ ಮುಂತಾದ ಗುಣಗಳು ಸಂಪೂರ್ಣವಾಗಿ ವಿಕಸನಗೊಂಡಾಗ ಶಾಸ್ತ್ರಗಳ ಮರ್ಮವು ಮುಮುಕ್ಷುವಿನ ಹೃದಯದಲ್ಲಿ ವಿಕಸನಗೊಳ್ಳುವುದು-ಇದೇ ಶಾಸ್ತ್ರಕೃಪೆ.

''ಆತ್ಮಕೃಪೆಯಾದರೆ ಭಗವಂತನ ಕೃಪೆಯೂ ಆಗುವುದು. ಭಗವತ್ಕೃಪೆ ಆಗದಿದ್ದರೆ ಮನುಷ್ಯನ ಪ್ರಯತ್ನವೆಲ್ಲ ವ್ಯರ್ಥವೆ. ಆದ್ದರಿಂದ ನಿರಭಿಮಾನಿಯಾಗಿ ಸಾಧನೆ-ಭಜನೆಗಳಿಂದ ಈಶ್ವರ ಕೃಪೆಯನ್ನು ಪಡೆಯಲು ಪ್ರಯತ್ನಿಸಬೇಕು. ಠಾಕೂರರು ಹೇಳುತ್ತಿದ್ದರು, 'ಕೃಪೆಯ ನಸುಗಾಳಿ ಸದಾ ಬೀಸುತ್ತಿದೆ. ನೀನು ಹಾಯಿಯನ್ನು ಏರಿಸು.'

''ನೋಡು, ನಿನಗೊಂದು ಮಾತು ಹೇಳುತ್ತೇನೆ - ಪ್ರತಿದಿನವೂ ಶಾಸ್ತ್ರಗಳನ್ನೋದಿದರೆ ಶಾಸ್ತ್ರ ದೃಷ್ಟಿಯು ತೆರೆದುಕೊಳ್ಳುವುದು. ಆಗ ಅವುಗಳ ಮರ್ಮದ ಅರಿವು ಸಹ ಆಗುತ್ತದೆ. ಜ್ಞಾನೋದಯವಾಗುತ್ತದೆ. ಹರಿ ಮಹಾರಾಜರು ಶಾಸ್ತ್ರದ್ರಷ್ಟಾರರಾಗಿದ್ದರು. ಅವರು ಶಾಸ್ತ್ರಗಳ ಮೇಲೆ ಸದಾ ನೂತನ ಬೆಳಕನ್ನು ಚೆಲ್ಲುತ್ತಿದ್ದರು.

ಇಂದು ಬೆಳಗ್ಗೆ ಸ್ವಾಮಿ ಧೀರೇಶಾನಂದರು ಅನೇಕ ಉದಾಹರಣೆಗಳೊಂದಿಗೆ ವೇದಾಂತದ ವ್ಯಾವಹಾರಿಕ ಆಯಾಮವನ್ನು ಚರ್ಚಿಸಿದರು. ''ನೋಡು, ಬ್ರಹ್ಮವನ್ನು ಮಾತಿನಲ್ಲಿ ವರ್ಣಿಸಲಾಗದು. 'ಅವಚನ' ಎಂದರೆ ಮೌನದಿಂದ ಅದರ ಇಂಗಿತವನ್ನು ಮಾಡಬಹುದು. ಗುರುಗಳಾದ ವಾರ್ಷ್ವರು ಶಿಷ್ಯರಾದ ವಾಸ್ಕಲಿಗೆ ಉಪದೇಶ ನೀಡುವಾಗ ಹೀಗೆ ಹೇಳುತ್ತಾರೆ- 'ಉಪಶಾಂತೋಽಯಮಾತ್ಮಾ' ಅರ್ಥಾತ್ ಆತ್ಮದ ಉಪಶಾಂತ ಸ್ವರೂಪವು.'ಯೋಗವಾಸಿಷ್ಠ'ದಲ್ಲಿ ವಸಿಷ್ಠರು ರಾಮಚಂದ್ರನಿಗೆ ನಾನಾ ಉಪದೇಶ



ಗಳನ್ನು ನೀಡಿ ಬಳಿಕ ಮೌನವನ್ನು ತಾಳಿದರು ಎಂದಿದೆ. ಆಗ ರಾಮಚಂದ್ರ, ಹೇಳುತ್ತಾನೆ, ''ಇಷ್ಟೊಂದು ಉಪದೇಶಗಳನ್ನು ನೀಡದೆ ಮೊದಲಿನಿಂದಲೇ ಮೌನ ತಾಳಿದ್ದರೆ ಸರಿಯಾಗಿತ್ತು'' ಎಂದು. ಪ್ರತ್ಯುತ್ತರವಾಗಿ ವಸಿಷ್ಠರು ಹೇಳುವರು, ''ಮೊದಲಿನಿಂದಲೆ ಮೌನ ತಳೆದರೆ ಜನರು ನನ್ನನ್ನು ಮೂರ್ಖ, ಏನೂ ತಿಳಿಯದವನು ಎಂದು ಭಾವಿಸುವರು. ಆದ್ದರಿಂದಲೇ ಎಲ್ಲವನ್ನೂ ಹೇಳಿ, ಬಳಿಕ ಮೌನವನ್ನು ತಳೆದಿರುವೆ.'' ತತ್ತ್ವವನ್ನು ಶಬ್ದಗಳಿಂದ ವರ್ಣಿಸಲಸಾಧ್ಯ. ಇದರ ರಹಸ್ಯವನ್ನು ತಿಳಿದುಕೊಳ್ಳಬೇಕಾದರೆ ನೀನು ಮೌನವನ್ನವಲಂಬಿಸಬೇಕು.

''ಸತ್ಸಂಗ ಮಾಡದಿದ್ದರೆ ಮನಸ್ಸು ಭಗವಂತನತ್ತ ತಿರುಗುವುದಿಲ್ಲ. 'ಸತ್ಸಂಗ' ಎಂಬ ಪದದ ಮುಖ್ಯ ಅರ್ಥ- 'ಸತ್‌ನ ಸಂಗ' ಅಥವಾ 'ಸತ್‌ಸ್ವರೂಪನಾದ ಭಗವಂತನ ಸಂಗ' ಎಂದು. 'ಆತನೊಂದಿಗೆ ಐಕ್ಯವಾಗುವುದು' ಅರ್ಥಾತ್ ಬ್ರಹ್ಮಾಕಾರ ವೃತ್ತಿಯಲ್ಲಿ ಸ್ಥಿತನಾಗುವುದು, 'ಸತ್ಸಂಗ' ಶಬ್ದದ ಗೌಣ ಅರ್ಥ ಸತ್ಸ್ವರೂಪನಾದ ಪರಮಾತ್ಮನ ಚಿಂತನೆಯನ್ನು ಮಾಡುವ ಸಾಧು ಜನರ ಸಂಗ. ತತ್ತ್ವಜ್ಞಾನಿಗಳಾದ ಮಹಾಪುರುಷರಿಂದ ರಚಿಸಲ್ಪಟ್ಟ ಗ್ರಂಥ ಹಾಗೂ ಅವರ ಅನುಭೂತಿಗಳನ್ನು ಹೊಂದಿರುವ ಉಪದೇಶ ಹಾಗೂ ನುಡಿಗಳ ಅಧ್ಯಯನ ಮಾಡುವುದೂ ಸತ್ಸಂಗವೆ.''

ಜನರ ಆಂತರ್ಯ, ಹಾಗೂ ಹೊರಗಿನ ಅಶಾಂತಿಗಳ ಬಗ್ಗೆ ಉದಾಹರಣೆಗಳನ್ನು ನೀಡುತ್ತ ಅವರೆಂದರು, ''ನೋಡು, ನಾಯಿಯೊಂದರ ತಲೆಯಲ್ಲಿ ಹುಣ್ಣಾಗಿ ಅದರಲ್ಲಿ ಕ್ರಿಮಿಗಳು ಹುಟ್ಟಿವೆ. ನಾಯಿಯು ಬೋನಿನಲ್ಲಿದೆ. ಅದು ಕೇವಲ ಒಳಗಿನ ನೋವನ್ನು ಅನುಭವಿಸುತ್ತದೆ. ನಂತರ ಅದು ಹೊರಗೆ ಬಂದಾಗ ಹುಣ್ಣಿನ ಮೇಲೆ ನೊಣಗಳು ಕುಳಿತುಕೊಳ್ಳಲಾರಂಭಿಸಿದವು. ಆಗ ನಾಯಿಗೆ ಒಳಗೂ, ಹೊರಗೂ ಉರಿ-ನೋವುಗಳು! ಹಾಗೆಯೆ ನಿರ್ಜನ ಪ್ರದೇಶಲ್ಲಿದ್ದಾಗ ಮನುಷ್ಯನ ಮನಸ್ಸಿನಲ್ಲಿ ಭೋಗಲಾಲಸೆಯಿದ್ದರೆ, ಅಶಾಂತಿಯಿಂದ ಚಡಪಡಿಸುತ್ತಾನೆ. ಅಂಥವನು ಭೋಗ ವಸ್ತುವಿನ ಸಂಪರ್ಕಕ್ಕೆ ಬಂದರೆ, ಆಗ ಅತೃಪ್ತ ಆಸೆಗಳನ್ನು ಪೂರೈಸಿಕೊಳ್ಳದೆ ಹುಚ್ಚನಂತಾಗುತ್ತಾನೆ. ಒಳಗಿನ ಮನಸ್ಸು ಹಾಗೂ ಹೊರಗಿನ ಇಂದ್ರಿಯಗಳು ಅವನನ್ನು ಪೀಡಿಸುತ್ತ ಅಶಾಂತಿ ಗೀಡುಮಾಡುತ್ತವೆ. ಉಪಾಯ-ಸಾಧುಸಂಗ.

**ಕ್ಷಣಮಿಹ-ಸಜ್ಜನ-ಸಂಗತಿರೇಕಾ**
**ಭವತಿ ಭವಾರ್ಣವ ತರಣೇ ನೌಕಾ ।**

''ವಿವೇಕ-ವೈರಾಗ್ಯಗಳಿಲ್ಲದೆ ಬರಿಯ ಶಾಸ್ತ್ರ-ಪಠನದಿಂದ ಯಾವ ಪ್ರಯೋಜನವೂ ಇಲ್ಲ. ವೇದಾಂತಶಾಸ್ತ್ರದಲ್ಲಿ 'ಅಧಿಕಾರ'ಕ್ಕೆ ಬಹಳ ಮಹತ್ವವಿದೆ. ಗುರುಗಳು ಅದೆಷ್ಟು ಉಪದೇಶವನ್ನು ನೀಡಿದರೂ ಶಿಷ್ಯರು ಯೋಗ್ಯರಾಗಿರದಿದ್ದರೆ ಉಪದೇಶ ಫಲಿಸುವುದಿಲ್ಲ. ಮನುಷ್ಯನ ಬುದ್ಧಿ ನಾಲ್ಕು ಪ್ರಕಾರದ್ದು. ಒಂದು-ಕಲ್ಲಿನಂತೆ, ಎರಡು-ರಬ್ಬರಿನಂತೆ, ಮೂರು-ಚರ್ಮದಂತೆ, ನಾಲ್ಕು-ಎಣ್ಣೆಯಂತೆ.

''ಒಂದು - ಯಾರ ಬುದ್ಧಿ ಕಲ್ಲಿನಂತಿರುವುದೊ, ಅಂತಹವನಿಗೆ ಏನನ್ನೂ ಕಲಿಸಲಾಗದು. ಕಲ್ಲಿಗೆ ಮೊಳೆಯನ್ನು ಹೇಗೆ ಹೊಡೆಯಲಾಗದೊ, ಅದೇ ರೀತಿ ಸ್ಥೂಲ ಬುದ್ಧಿಯ ವ್ಯಕ್ತಿಯು ತತ್ತ್ವವಾಕ್ಯಗಳನ್ನು ಧಾರಣೆ ಮಾಡಿಕೊಳ್ಳಲು ಅಸಮರ್ಥನು.

''ಎರಡು - ರಬ್ಬರ್ ಸ್ಥಿತಿಸ್ಥಾಪಕ ಪದಾರ್ಥ. ರಬ್ಬರಿನಲ್ಲಿ ಮೊಳೆಯನ್ನು ಹೊಡೆಯಬಹುದು. ಆದರೆ ಕೈಬಿಟ್ಟ ಮಾತ್ರಕ್ಕೆ ಮೊಳೆ ಹೊರಗೆ ಬರುತ್ತದೆ. ರಬ್ಬರಿನಂತಹ ಬುದ್ಧಿಯುಳ್ಳವರಲ್ಲಿ ಕಲಿತದ್ದು ಕ್ಷಣಕಾಲ ಮಾತ್ರವೆ ಉಳಿಯುವುದು. ಭೋಗವಾಸನೆಗಳಿಂದಾಗಿ ಕಲಿತದ್ದನ್ನು ಮತ್ತೆ ಮರೆತುಬಿಡುತ್ತಾರೆ.

''ಮೂರು - ಚರ್ಮದ ಮೇಲೆ ಮೊಳೆ ಹೊಡೆದರೆ, ಒಳಗೆ ಹೋದಷ್ಟಕ್ಕೆ ನಿಲ್ಲುತ್ತದೆ. ಅದೇ ರೀತಿ ಚರ್ಮದಂತೆ ಬುದ್ಧಿಯುಳ್ಳ ವ್ಯಕ್ತಿಯು ಎಷ್ಟು ಉಪದೇಶವನ್ನು ಪಡೆಯುವನೋ, ಅಷ್ಟನ್ನು ಮಾತ್ರ ಗ್ರಹಿಸುವನು.

''ನಾಲ್ಕು - ತೈಲದಂತೆ ಬುದ್ಧಿಯುಳ್ಳವನು; ಸರ್ವೋತ್ಕೃಷ್ಟನು. ಒಂದು ಪಾತ್ರೆ ನೀರಿನಲ್ಲಿ ಒಂದು ಬಿಂದು ಎಣ್ಣೆಯನ್ನು ಬಿಟ್ಟರೆ, ಅದು ತಕ್ಷಣವೇ ನೀರಿನ ಮೇಲೆ ಸಂಪೂರ್ಣವಾಗಿ ಹರಡಿಕೊಳ್ಳುವುದು. ಅದೇ ರೀತಿ ಬುದ್ಧಿವಂತನಾದವನು ಕಿಂಚಿತ್ ಉಪದೇಶವನ್ನು ಪಡೆದರೂ, ಮನನದಿಂದ ಸಂಪೂರ್ಣ ಜ್ಞಾನವನ್ನು ಪಡೆಯುವನು.''

ತದನಂತರ ಮಹಾರಾಜರು ನಾನಾ ವಿಷಯಗಳ ಬಗ್ಗೆ ಮಾತನಾಡಿದರು: ''ಒಂದು ದಿನ ರಾಜಾ ಮಹಾರಾಜರಿಗೆ ಕರುಣಾನಂದರು ಹೇಳಿದರು: 'ಮಹಾರಾಜ್, ನಾನು ಬ್ರಹ್ಮಜ್ಞಾನವನ್ನು ಪಡೆದಿರುವೆ.' ಮಹಾರಾಜರು ತುಟಿಯ ಮೇಲೆ ಬೆರಳಿರಿಸಿ 'ಹೀಗೆಂದು ಯಾರಿಗೂ ಹೇಳಬೇಡ' ಎಂದರು. ಅಲ್ಲಿಯೇ ಇದ್ದ ಬಾಬುರಾಮ ಮಹಾರಾಜರು ಕೇಳಿದರು, 'ಏನಪ್ಪ! ಈ ಬಗ್ಗೆ ನಿನಗೇನಾದರೂ ಸಂದೇಹವುಂಟೆ? ಸಂದೇಹವಿದ್ದ ಪಕ್ಷದಲ್ಲಿ ಖಂಡಿತವಾಗಿಯೂ ಆಗಿಲ್ಲ.'

''ಮನಸ್ಸಿನ ಕನ್ನಡಿಯನ್ನು ಹೊರಗಿರಿಸಿ ತೀರ್ಥ, ದೇವದೇವಿಯರ ದರ್ಶನವನ್ನು ಮಾಡುತ್ತಿರುವೆ. ಈ ಕನ್ನಡಿಯನ್ನು ಒಳಗಿರಿಸಿದರೆ ಆಗ ಆತ್ಮದರ್ಶನವನ್ನು ಪಡೆಯುವೆ.

''ನೋಡು, ಆತ್ಮಜ್ಞಾನವನ್ನು ಪಡೆಯಬೇಕೆಂದಿದ್ದರೆ, 'ಆವೃತ್ತ ಚಕ್ಷು' ಆಗಿರಬೇಕು. ಎಲ್ಲ ಇಂದ್ರಿಯಗಳ ಬಹಿರ್ಮುಖ ವೃತ್ತಿಯನ್ನು ತಡೆದರೆ ಮನಸ್ಸು ಶಾಂತವಾಗುವುದು. ಈ ವೃತ್ತಿಗಳನ್ನೆಲ್ಲ ತಡೆದರೆ ದ್ರಷ್ಟನ ಸ್ವರೂಪವು ಗೋಚರಿಸುತ್ತದೆ. ಮನಸ್ಸು ಈ ವಿಶ್ವರಚನೆಯ ನೆಲೆಗೆ ಏರಿದಾಗ ಅತೀವ ಆನಂದವನ್ನು ಅನುಭವಿಸಬಹುದು.

''ಅನೇಕರು ಜಪಧ್ಯಾನಗಳನ್ನು ಮಾಡುತ್ತಾರೆ, ಆಧ್ಯಾತ್ಮಿಕ ಜೀವನ ನಡೆಸುತ್ತಾರೆ. ಆದರೆ ಒಳಗೆ ಕ್ರೋಧ, ಅಹಂಕಾರಗಳಿರುತ್ತವೆ. ಇಂಥವರು ಜ್ಞಾನವನ್ನು ಪಡೆಯುವುದಿಲ್ಲ. ಠಾಕೂರರು ಹೇಳುತ್ತಾರೆ, 'ಸಾತ್ತ್ವಿಕ ಜನರ ಕ್ರೋಧ, ನೀರಿನ ಮೇಲೆಳೆದ ಗೀರಿನಂತೆ.' ಜ್ಞಾನಿಗಳ ಕ್ರೋಧ ಅಲ್ಪಕಾಲಿಕ. ಅಜ್ಞಾನಿಗಳು ಮೂರು ತಲೆಮಾರಿನವರೆಗೂ ಶತ್ರುಗಳಾಗಿರುತ್ತಾರೆ.

''ಜ್ಞಾನಿಗಳ ವಿವಿಧ ಶ್ರೇಣಿಗಳ ಬಗ್ಗೆ ವೇದಾಂತ ಶಾಸ್ತ್ರಗಳು ಹೀಗೆ ಹೇಳುತ್ತವೆ- ಬ್ರಹ್ಮವಿದ್, ಬ್ರಹ್ಮವಿದ್ವರ, ಬ್ರಹ್ಮವಿದ್ವರೀಯಾನ್, ಬ್ರಹ್ಮವಿದ್ವರಿಷ್ಠ. ಆದರೆ ಒಮ್ಮೆ ಜ್ಞಾನವನ್ನು ಪಡೆದೆ ಎಂದರೆ ಮುಗಿಯಿತು. ಒಂದೇ ಕ್ಷಣವಾದರೂ, ತತ್ತ್ವದ ಉಪಲಬ್ಧಿ ಆಯಿತೆಂದರೆ, ಆ ಅನುಭವದ ಆನಂದ ಚಿರಸ್ಥಾಯಿ.

''ನೋಡು, ಪ್ರಪಂಚದಲ್ಲಿ ಎಲ್ಲರೂ ಮುಮುಕ್ಷುಗಳೆ. ಎಲ್ಲರೂ ದುಃಖನಿವೃತ್ತಿ ಹಾಗೂ ಆನಂದವನ್ನೇ ಅರಸುತ್ತಾರೆ. ಆದರೆ ಮಾಯಾಮೋಹದ ವಶಕ್ಕೊಳಗಾಗಿ ಅವರು ವಿಷಯಾನಂದವನ್ನೇ ಜೀವನದ ಲಕ್ಷ್ಯವೆಂದು ಭಾವಿಸುತ್ತ ಅಶಾಂತಿಯಿಂದ ಕಷ್ಟಪಡುತ್ತಾರೆ. ಹೊಡೆತ ಬಿದ್ದಾಗ ಮಾತ್ರ ಮನುಷ್ಯನು ಸರಿದಾರಿಗೆ ಬರುವನು.

''ವೇದಾಂತದ ಪ್ರಕರಣ ಗ್ರಂಥಗಳಲ್ಲಿ ವಿದ್ಯಾರಣ್ಯ ಮುನಿಗಳ 'ಪಂಚದಶಿ'ಯನ್ನೋದಿದರೆ ಆನಂದವಾಗುತ್ತದೆ. ಈ ಪುಸ್ತಕವನ್ನು ಚೆನ್ನಾಗಿ ಓದು. ಅದಿರಲಿ, ನೀನು ಸಂಧಿಕಾಲವನ್ನು ಗುರುತಿಸಬಲ್ಲೆಯ? 'ಯೋಗವಾಸಿಷ್ಠ'ದಲ್ಲಿ ಹೀಗಿದೆ - ಜಾಗ್ರತ್ ಅವಸ್ಥೆಯಲ್ಲಿ ಅಂತವಾಗಿ, ನಿದ್ರಾಪ್ರಾಪ್ತಿಯ ಆದಿಕಾಲದಲ್ಲಿ ಯಾವ ಅವಸ್ಥೆಯ ಉದಯವಾಗುವುದೋ ಆ ಭಾವವನ್ನು

ಸದಾ ನೆನಪಿನಲ್ಲಿರಿಸಿಕೊಂಡರೆ ಪ್ರತ್ಯಕ್ಷ ಅಕ್ಷಯ ಆನಂದವನ್ನು ಪಡೆಯಲಾಗುವುದು. *(೧೦.೮)* ಈ ಅವಸ್ಥೆಯಲ್ಲಿ ಯಾವುದೇ ವೃತ್ತಿಗಳಿರುವುದಿಲ್ಲ. ಆಗ ಬರಿಯ ಅನುಭವಸ್ವರೂಪ ಸಾಕ್ಷಿ ಚೈತನ್ಯದ ಪ್ರಕಾಶವು ವಿದ್ಯಮಾನವಾಗಿರುತ್ತದೆ. ಇದಕ್ಕೆ 'ಸಂಧಿ ಕಾಲ' ಎನ್ನುವುದು.

'' 'ಲಘುವಾಕ್ಯವೃತ್ತಿ'ಯಲ್ಲಿ ಹೀಗಿದೆ: ಕಾಲದಲ್ಲಿ ಚಿತ್ತದ ವೃತ್ತಿಯೊಂದು ಲಯವಾಗಿ ಮತ್ತೊಂದು ವೃತ್ತಿಯು ಏಳುವ ವರೆಗಿನ ಆ ವೃತ್ತಿರಹಿತ ಅವಸ್ಥೆ, ಅರ್ಥಾತ್ ಸಂಧಿಕಾಲದಲ್ಲಿ ಸರ್ವಕಲ್ಪನಾರಹಿತ ನಿರ್ವಿಶೇಷ ಆತ್ಮಚೈತನ್ಯವು ಸ್ಪಷ್ಟವಾಗಿ ಪ್ರಕಾಶಿಸುತ್ತದೆ.

'' 'ಸಂಧಿ'ಯ ಉದಾಹರಣೆ – ಒಂದು ಮುತ್ತಿನ ಹಾರ. ನೀನದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಎರಡು ಮುತ್ತುಗಳ ನಡುವೆ ದಾರ ಅಥವಾ ಚೈನ್ ಇರುವುದನ್ನು ನೋಡುವೆ. ದೂರದಿಂದ ನೋಡಿದರೆ ಸುಂದರ ಹಾರ ಮಾತ್ರವೇ ಕಾಣಿಸುತ್ತದೆ; ದಾರ ಅಥವ ಚೈನ್ ಕಾಣಿಸುವುದಿಲ್ಲ. ಈ ದಾರ ಅಥವ ಚೈನೇ 'ಪ್ರಜ್ಞೆ.' ಒಂದೊಂದು ಮುತ್ತು ಕೂಡ ಒಂದೊಂದು ಚಿತ್ತವೃತ್ತಿ. ಈ ವೃತ್ತಿಗಳು ಚೈತನ್ಯಸಾಗರದ ಅಲೆಗಳಂತೆ ಏಳುತ್ತವೆ–ಇಳಿಯುತ್ತವೆ. ಪ್ರತಿಯೊಂದು ವೃತ್ತಿಯೂ 'ಅಹಂ ಬ್ರಹ್ಮಾಸ್ಮಿ', 'ಅಹಂ ಬ್ರಹ್ಮಾಸ್ಮಿ' ರೂಪದಲ್ಲಿ ಏಳುತ್ತಾ ಹೋದಾಗ ಜ್ಞಾನ ವುಂಟಾಗುತ್ತದೆ.

''ವೇದಾಂತಸಾರದಲ್ಲಿ ಹೀಗಿದೆ:– ''ಅಹಂ ನಿತ್ಯ–ಶುದ್ಧ–ಬುದ್ಧ–ಮುಕ್ತ–ಸತ್‌ಸ್ವರೂಪ, ಪರಮಾನಂದ–ಅನಂತ–ಅದ್ವಿತೀಯ ಬ್ರಹ್ಮ— ಈ ರೀತಿ ಚಿತ್ತವೃತ್ತಿಗಳು ಜನ್ಮತಳೆದು ಅವುಗಳು ಚೈತನ್ಯಪ್ರತಿಬಿಂಬಗಳನ್ನು ಗ್ರಹಿಸುತ್ತವೆ.

'' 'ಕೇನೋಪನಿಷತ್'ನಲ್ಲಿ, 'ಪ್ರತಿಬೋಧವಿದಿತಂ ಮತಂ ಅಮೃತತ್ವಂ ಹಿ ವಿಂದತೇ' ಎಂದಿದೆ – ಬುದ್ಧಿವೃತ್ತಿ ಸಮೂಹ ದಲ್ಲಿ ಆತ್ಮರೂಪದ ಬ್ರಹ್ಮನ ಅರಿವು ಉಂಟಾದ ಕೂಡಲೆ ನಿಜ ವಾದ ಜ್ಞಾನಲಾಭವಾಗುವುದು. ಏಕೆಂದರೆ ಈ ಜ್ಞಾನಲಾಭದಿಂದ ಮೋಕ್ಷಪ್ರಾಪ್ತಿಯಾಗುವುದು.

''ವೇದಾಂತ ಶಾಸ್ತ್ರದಲ್ಲಿ ಎರಡು ಪದಗಳಿವೆ: 'ಅಸತ್' ಮತ್ತು 'ಮಿಥ್ಯ'. 'ಅಸತ್' ಎಂದರೆ ಇಲ್ಲ ಹಾಗೂ ಕಾಣಿಸುವುದಿಲ್ಲ. ಉದಾಹರಣೆ – ಬಂಜೆಯ ಪುತ್ರ ಅಥವ ಮೊಲದ ಕೋಡು. 'ಮಿಥ್ಯ' ಎಂದರೆ ಇಲ್ಲ, ಆದರೆ ಕಾಣಿಸುವುದು. ಉದಾಹರಣೆ – ಮರೀಚಿಕೆಯ ನೀರು, ಹಗ್ಗದಲ್ಲಿ ಸರ್ಪ, ಸಿಂಪಿಯಲ್ಲಿ ರಜತ ಅಥವ ಬೆಳ್ಳಿ.

''ಈ ಜಗತ್ತು ವಿಲೀನವಾಗುತ್ತದೆ. ಯಾವುದು ಭೂತ, ವರ್ತಮಾನ ಹಾಗೂ ಭವಿಷ್ಯತ್ಕಾಲಗಳಲ್ಲಿ ಇರುವುದೋ ಅದೇ ಏಕಮಾತ್ರ ಸತ್ಯ. ಈ ಜಗತ್ತಿನಲ್ಲಿ ಮೂರು ಕಾಲಗಳಲ್ಲೂ ಇರುವಂತಹ ವಸ್ತು ಯಾವುದೂ ಇಲ್ಲ. ಆದ್ದರಿಂದಲೇ ಜಗತ್ತು ಮಿಥ್ಯೆ.

''ಜಗತ್ತಿನ ಅಸ್ತಿತ್ವದ ಬಗ್ಗೆ ಅನೇಕ ಮತಗಳಿವೆ. ಜಗತ್ತಿನ ಅಸ್ತಿತ್ವದಿಂದಾಗಿ ನಾವು ಅದನ್ನು ಕಾಣಬಹುದಾಗಿದೆ – ಎಂದು ಸೃಷ್ಟಿದೃಷ್ಟಿವಾದಿಗಳು ಹೇಳುತ್ತಾರೆ. ಜಗತ್ತು ಅನಿತ್ಯ. ಆದರೆ ಮಿಥ್ಯೆಯಲ್ಲವೆಂಬುದು ಅವರ ಅಭಿಪ್ರಾಯ. ಈ ಮತದವರು ಜಗತ್ತಿನ ವ್ಯಾವಹಾರಿಕ ಅಸ್ತಿತ್ವವನ್ನು ಸ್ವೀಕರಿಸುತ್ತಾರೆ.

''ಜಗತ್ತನ್ನು ನೋಡಬಹುದು, ಆದ್ದರಿಂದ 'ಇದೆ' ಎಂಬುದು ದೃಷ್ಟಿಸೃಷ್ಟಿವಾದಿಗಳ ಅಭಿಪ್ರಾಯ. ಈ ಮತವು ಜಗತ್ತಿನ ಪ್ರಾತಿಭಾಸಿಕ ಅಸ್ತಿತ್ವವನ್ನು ಸ್ವೀಕರಿಸುತ್ತದೆ. ಜಗತ್ತು ಸ್ವಪ್ನವತ್.

''ಜಗತ್ತಿಗೆ ಅಸ್ತಿತ್ವವಿಲ್ಲ. ಅದು ಕಾಣುವುದೂ ಇಲ್ಲ–ಬ್ರಹ್ಮ ಮಾತ್ರವೆ ಇರುವುದು – ಎಂಬುದು ಅಜಾತವಾದಿಗಳ ಮತ. ಈ ಮತಾವಲಂಬಿಗಳು ಪಾರಮಾರ್ಥಿಕ ಅಸ್ತಿತ್ವವನ್ನು ಮಾತ್ರ ಸ್ವೀಕರಿಸುತ್ತಾರೆ.

''ನೋಡು – ಈ 'ನಾನು' ಎಂಬುದರಿಂದಲೆ ಇಷ್ಟೆಲ್ಲ ತೊಂದರೆಗಳು. 'ನಾನು' ಇರುವುದರಿಂದಲೆ ಜಗತ್ತು ಇರುವುದು. 'ನಾನು' ಇರದಿದ್ದರೆ ಜಗತ್ತು ಕೂಡ ಇಲ್ಲ. ಜ್ಞಾನಿಯು 'ಅಹಂ ಬ್ರಹ್ಮಾಸ್ಮಿ' ಎನ್ನುವುದರ ಮೂಲಕ 'ಅಪಕ್ವ ನಾನು' ಎಂಬುದನ್ನು ವಿಲಯ ಮಾಡುತ್ತಾನೆ. ಭಕ್ತನು 'ನಾನು ಶರಣು' ಎನ್ನುತ್ತ 'ಅಪಕ್ವ ನಾನು' (unripe ego) ಎಂಬುದನ್ನು ವಿಲಯಮಾಡುತ್ತಾನೆ.''

ತದನಂತರ ಮಹಾರಾಜರು ಉತ್ತರಕಾಶಿ, ಹೃಷೀಕೇಶ, ಹರಿದ್ವಾರಗಳಲ್ಲಿ ತಮ್ಮ ಸಂಸರ್ಗಕ್ಕೆ ಬಂದಿದ್ದ ಸಾಧುಗಳ ಬಗ್ಗೆ ಹೇಳಿದರು. ಯಾರನ್ನೂ ಅವಲಂಬಿಸದೆ (ನಿರಾವಲಂಬನೆಯಿಂದ) ಹಿಮಾಲಯದ ಗಿರಿಕಂದರಗಳಲ್ಲಿ ಹೇಗೆ ಜನರು ತಪಸ್ಸನ್ನಾಚರಿಸುವರು ಹಾಗೂ ಈ ಮಹಾತ್ಮರ ತ್ಯಾಗ–ವೈರಾಗ್ಯ, ಶಾಸ್ತ್ರಜ್ಞಾನ, ಪವಿತ್ರ ಜೀವನದ ಕುರಿತು ಹಾಗೂ ಕಥೆಗಳನ್ನು ಕೇಳಿ ತಿಳಿದುಕೊಳ್ಳುವ ಪ್ರಬಲ ಕುತೂಹಲ ನನ್ನಲ್ಲಿತ್ತು.

೧೯೭೭ರ ಅಕ್ಟೋಬರ್ ತಿಂಗಳಿನಲ್ಲಿ ನಾನು ಕಾಶಿ ಸೇವಾಶ್ರಮದಲ್ಲಿ ಬೆಳಗ್ಗೆ–ಸಂಜೆಯೆನ್ನದೆ ಗಂಟೆಗಟ್ಟಲೆ ೧೦ನೇ ವಾರ್ಡ್‌ನಲ್ಲಿ ಕಳೆಯುತ್ತಿದ್ದೆ. ಮಹಾರಾಜರು ಬಹಳ ಉತ್ಸಾಹದಿಂದ ಕಳೆದುಹೋದ ತಮ್ಮ ಹಿಂದಿನ ದಿನಗಳ ನೆನಪುಗಳನ್ನೂ, ಅವರು ಒಡನಾಡಿದ್ದ ಮಹಾಪುರುಷರ ಬಗ್ಗೆಯೂ ಹೇಳುತ್ತಿದ್ದರು.

೧೯೩೭ರ ಆಗಸ್ಟ್ ತಿಂಗಳಿನಲ್ಲಿ ಉತ್ತರಕಾಶಿಯ ಲಕ್ಷ್ಮೇಶ್ವರದಲ್ಲಿ ದೇವಗಿರಿಜೀಯವರ ದರ್ಶನವನ್ನು ಪಡೆದಿದ್ದರೆಂದು ಹೇಳಿದರು. ಆಗವರು ಒಂದು ಕುಟೀರದಲ್ಲಿ ತಪಸ್ಸು ಮಾಡುತ್ತಿದ್ದರು. ಮಹಾರಾಜರು ತಮ್ಮ ಡೈರಿಯಲ್ಲಿ ದೇವಗಿರಿಜೀಯವರ ಆಧ್ಯಾತ್ಮಿಕ ಮಾತುಕತೆಗಳನ್ನು ಬರೆದಿದ್ದರು :

''ದೇವಗಿರಿಜೀ ಹೇಳುತ್ತಿದ್ದರು– 'ಮಗು. ಮನನ ಮಾಡು. ಒಂದೇ ಗ್ರಂಥವನ್ನು ಪುನಃ ಪುನಃ ಓದಿ ಕರಗತ ಮಾಡಿಕೊ.' ನಾನವರ ಪಕ್ಕದ ಕುಟೀರದಲ್ಲಿದ್ದೆ. ಅವರ ದಿನಚರಿಯನ್ನು ಗಮನಿಸಿರುವೆ. ಅವರು ಬೆಳಗಿನ ಜಾವದಿಂದ ೮ ಗಂಟೆಯವರೆಗೆ ಧ್ಯಾನ ಮಾಡುತ್ತಿದ್ದರು. ಬಳಿಕ ಪ್ರಾತಃಕರ್ಮಾದಿಗಳನ್ನು ಮುಗಿಸಿ

ಪೂಜೆ, ಗೀತಾಪಠನ, ವಿಷ್ಣುಸಹಸ್ರನಾಮ ಪಠನಗಳನ್ನು ತೀರಿಸಿ ೧೧ ಗಂಟೆಗೆ ಭಿಕ್ಷೆಗೆ ಹೋಗುತ್ತಿದ್ದರು. ಭೋಜನಾನಂತರ ಆಧ್ಯಾತ್ಮಿಕ ಮಾತುಕತೆ ನಡೆಯುತ್ತಿತ್ತು. ತದನಂತರ ಸ್ವಲ್ಪ ವಿಶ್ರಮಿಸಿ ಶಾಂಕರಭಾಷ್ಯದೊಂದಿಗೆ ಶಾಸ್ತ್ರಗಳನ್ನು ಕಲಿಸುತ್ತಿದ್ದರು. ಆಮೇಲೆ ಧ್ಯಾನ. ಬಳಿಕ ಆಹಾರವನ್ನು ಸೇವಿಸಿ ಧುನಿಯ ಸಮೀಪ ಕುಳಿತು ಶಾಸ್ತ್ರಚಿಂತನೆ ಮಾಡುತ್ತಿದ್ದರು. ಯಾವುದಾದರೂ ಶ್ಲೋಕವನ್ನು ಮರೆತರೆ ಕೆಲವು ತರಗೆಲೆಗಳನ್ನು ಬೆಂಕಿಯಲ್ಲಿ ಹಾಕಿ, ಆ ಬೆಳಕಿನಲ್ಲಿ ಶ್ಲೋಕವನ್ನು ಓದಲಾಗುತ್ತಿತ್ತು. ಆಧುನಿಕ ಯುಗದಂತೆ ಜಗಮಗಿಸುವ ದೀಪಗಳಿಲ್ಲದ ಆ ಪ್ರಾಚೀನ ಯುಗದಲ್ಲಿ ಭಾರತದ ಋಷಿಮುನಿಗಳು ಸಹಜವಾಗಿಯೇ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದರು. ದೇವಗಿರಿಜೀ ಸ್ವಾಮಿ ತುರೀಯಾನಂದರ ಜತೆಯಲ್ಲಿ ಉತ್ತರಕಾಶಿಯಲ್ಲಿದ್ದರು ಹಾಗೂ ಅವರ ತ್ಯಾಗ-ವೈರಾಗ್ಯಗಳ ಬಗ್ಗೆ ಹೇಳುತ್ತಿದ್ದರು.''

ಸ್ವಾಮಿ ಧೀರೇಶಾನಂದರು ತಮ್ಮ ಡೈರಿಯಲ್ಲಿ ಸ್ವಾಮಿ ಬ್ರಹ್ಮಪ್ರಕಾಶ, ಸ್ವಾಮಿ ಶರಣದಾಸ, ಸ್ವಾಮಿ ಮಾಧವಾನಂದ, ಸ್ವಾಮಿ ಶಂಕರಾನಂದ, ಸ್ವಾಮಿ ರಾಮಲಾಲಗಿರಿ, ಸಾಧು ಮಥುರನಾಥ ಮುಂತಾದ ಸಾಧುಗಳ ಉಪದೇಶಯುಕ್ತ ವಿಚಾರಗಳನ್ನು ಬರೆದಿರುವರು. ಮಥುರನಾಥರ ವೈರಾಗ್ಯದ ಪರಾಕಾಷ್ಠೆಯ ಬಗ್ಗೆ ಅವರು ಬರೆಯುತ್ತಾರೆ: ''ಅವರು ಭಿಕ್ಷೆಗೆಂದು ಹೋದಾಗ ರೊಟ್ಟಿಗಳನ್ನು ಸ್ವೀಕರಿಸುತ್ತಿದ್ದರು. ಆದರೆ ನೀರು ಸ್ವೀಕರಿಸುತ್ತಿರಲಿಲ್ಲ. 'ನೀರು ಗಂಗೆಯಲ್ಲಿ ಸಿಗುತ್ತದೆ' ಎನ್ನುತ್ತಿದ್ದರು. ಹಿಮಪಾತದಲ್ಲೂ ನಿರ್ವಸ್ತ್ರರಾಗಿ ಭಿಕ್ಷೆಗೆ ಹೋಗುತ್ತಿದ್ದರು. 'ಚಳಿಯಾಗುತ್ತಿಲ್ಲವೆ?' ಎಂದು ಯಾರಾದರೂ ಪ್ರಶ್ನಿಸಿದರೆ 'ಅಂದರ್ ಗರಮ್ ಹೈ' ಎಂದು ಉತ್ತರಿಸುತ್ತಿದ್ದರು. ಅವರು ಶರೀರಬೋಧೆಯಿಲ್ಲದ ಆತ್ಮಜ್ಞಾನಿ ಪುರುಷರಾಗಿದ್ದರು.''

ಎಲ್ಲ ವಿಷಯಗಳೂ ಪುಸ್ತಕಗಳಲ್ಲಿ ಸಿಗುವುದಿಲ್ಲ. 'ಆಧ್ಯಾತ್ಮಿಕ ಜೀವನ' ಎಂದರೇನು ಎಂಬುದು ಪವಿತ್ರ, ಪ್ರೇಮಪೂರ್ಣ ಹಾಗೂ ವಿದ್ವಾಂಸರಾದ ಸಾಧುಗಳ ಸಂಸ್ಪರ್ಶಕ್ಕೆ ಬಂದರೆ ತಿಳಿಯುತ್ತದೆ. ಸ್ವಾಮಿ ಧೀರೇಶಾನಂದರ ಸಾನ್ನಿಧ್ಯದಲ್ಲಿ ದೀರ್ಘ ಸಮಯ ಕಳೆಯುವ ಸೌಭಾಗ್ಯ ನನಗಿರಲಿಲ್ಲ. ಆದರೆ ಅಯಾಚಿತವಾಗಿಯೆ, ತಮ್ಮ ಸಂಪೂರ್ಣ ಜೀವನದಲ್ಲಿ ದುಂಬಿಯಂತೆ ವಿವಿಧ ಸಾಧುಗಳಿಂದ ಪಡೆದಿದ್ದ ಶಾಸ್ತ್ರಸಂಗ್ರಹ ಹಾಗೂ ಆಧ್ಯಾತ್ಮಿಕ ಸಂಪತ್ತನ್ನು ನನಗೆ ನೀಡಿ ಹೋಗಿದ್ದಾರೆ. ಕಾಶಿಯಲ್ಲಿ ನನಗೊಂದು ದಿನ ಹೇಳಿದ್ದರು, ''ನೋಡು, ನಾನು ಸತ್ತರೆ ಈ ಪುಸ್ತಕಗಳನ್ನೆಲ್ಲ ಗಂಗೆಗೆ ಎಸೆಯುತ್ತಾರೆ. ಅದರ ಬದಲು ನೀನು ಇವುಗಳನ್ನು ಅಮೆರಿಕಾಗೆ ತೆಗೆದುಕೊಂಡು ಹೋಗು. ನಿನಗೆ ಇವುಗಳ ಬೆಲೆ ತಿಳಿಯುತ್ತದೆ.''

**೩.೧೧.೧೯೭೭, ಕಾಶಿ ಸೇವಾಶ್ರಮ**

ಇಂದು ಮಹಾರಾಜರು ನನಗೆಂದರು: ''ನೋಡು, ರವೀಂದ್ರನಾಥರು ತಮ್ಮ ಕವಿತೆಯಲ್ಲಿ ಪ್ರತ್ಯಕ್ ಚೈತನ್ಯದ ಇಂಗಿತ ಮಾಡುತ್ತಾರೆ:

**'ಬಹು ದಿನಗಳಿಂದ, ಬಹು ಕ್ರೋಶ ದೂರದಲಿ**
**ಅತಿ ವ್ಯಯವ ಮಾಡಿ, ಬಹು ದೇಶಗಳನಲೆದು**
**ನೋಡಹೋದೆ ಪರ್ವತಮಾಲೆಯನು,**
**ನೋಡಹೋದೆ ನಾ ಆ ಅನಂತ ಸಮುದ್ರವನು.**
**ದಿಟ್ಟಿಸಿ ನಾ ನೋಡಲಿಲ್ಲ -**
**ಮನೆ ಎದುರು, ಎರಡು ಹೆಜ್ಜೆಯನಿರಿಸಿ**
**ಆ ತೆನೆ-ತುದಿಯಲಿರುವ**
**ಶಿಶಿರ ಬಿಂದುವೊಂದನು.'**

ಈ ಶಿಶಿರ-ಬಿಂದುವೆ ಪ್ರತ್ಯಕ ಚೈತನ್ಯ. ಈ ಶಿಶಿರ ಬಿಂದುವಿನೊಳಗೆ ಅನಂತ ಆಕಾಶದ ಪ್ರತಿಬಿಂಬವು ಗೋಚರವಾಗುತ್ತದೆ. ಅದೇ ರೀತಿ ನಮ್ಮ ಪ್ರತ್ಯಗಾತ್ಮನಲ್ಲಿ ಅನಂತ ಪರಮಾತ್ಮನ ಅನುಭವವನ್ನು ಪಡೆಯಬಹುದು.

೧೯೮೬ರಲ್ಲಿ ಫೆಬ್ರವರಿ ತಿಂಗಳಿನಲ್ಲಿ ಸ್ವಾಮಿ ಧೀರೇಶಾನಂದರನ್ನು ದೆಹಲಿಯಲ್ಲಿ ಭೇಟಿಯಾಗಿದ್ದೆ. ಅವರು ಚಿಕಿತ್ಸೆಗೆಂದು ಅಲ್ಲಿಗೆ ಬಂದಿದ್ದರು. ಅವರನ್ನು ಕಂಡಾಗಲೆಲ್ಲ ಕೇವಲ ಶಾಸ್ತ್ರ ಹಾಗೂ ಸಾಧನೆ-ಭಜನೆಯ ಬಗ್ಗೆಯೆ ಮಾತು ನಡೆಯುತ್ತಿತ್ತು. **'ಅನ್ಯಾ ವಾಚೋ ವಿಮುಂಚಥಾಮೃತಸ್ಯೈಷ ಸೇತುಃ** *(ಮುಂಡಕ ಉಪನಿಷತ್ತು ೨.೨.೫)* – 'ಪ್ರಾಪಂಚಿಕ ಮಾತುಗಳನ್ನು ಬಿಟ್ಟುಬಿಡು, ಆತ್ಮ ಜ್ಞಾನವನ್ನು ಪಡೆಯಲು ಇದೇ ಉಪಾಯ.'

ನಂತರ ೧೯೮೭ರ ಗ್ರೀಷ್ಮದಲ್ಲಿ ಭಾರತಕ್ಕೆ ಬಂದಾಗ ಸೆಪ್ಟೆಂಬರ್ ೩ ರಿಂದ ೬ ರ ವರೆಗೆ ಕಂಖಲ್‌ನಲ್ಲಿದ್ದೆ. ಸೆಪ್ಟೆಂಬರ್ ೪ ರಂದು ಸ್ವಾಮಿ ಧೀರೇಶಾನಂದರೊಂದಿಗೆ ತುಂಬಾ ಮಾತನಾಡಿದೆ. ಅವರು ಅಂತರ್ಮುಖಿಯಾಗಿದ್ದರು. ತಮ್ಮ ಉಳಿದ ಡೈರಿಗಳನ್ನು ನನಗೆ ಕೊಟ್ಟರು. ''ಈಗ 'ರಾಮಕೃಷ್ಣ ಪುಂಥಿ'(ಬಂಗಾಳಿ)ಯನ್ನು ಓದುತ್ತ ಸ್ಮರಣೆ-ಮನನದಲ್ಲಿ ಕಾಲ ಕಳೆಯುತ್ತಿರುವೆ. ಈಗ ಶಾಸ್ತ್ರಾದಿಗಳು ರುಚಿಸುತ್ತಿಲ್ಲ,'' ಎಂದರು.

'ವಿವೇಕಚೂಡಾಮಣಿ'ಯಿಂದ ಉಲ್ಲೇಖಿಸಿದರು: *(೨೭೦)*

**ಲೋಕಾನುವರ್ತನಂ ತ್ಯಕ್ತ್ವಾ ತ್ಯಕ್ತ್ವಾ ದೇಹಾನುವರ್ತನಮ್ ।**
**ಶಾಸ್ತ್ರಾನುವರ್ತನಂ ತ್ಯಕ್ತ್ವಾ ಸ್ವಾಧ್ಯಾಸಾಪನಯಂ ಕುರು ॥**

'ಲೌಕಿಕ ಹಾಗೂ ಸಾಮಾಜಿಕ ಶಿಷ್ಟಾಚಾರವನ್ನು ತೊರೆದು, ಶರೀರದ ಸುಖೇಚ್ಛೆಯನ್ನು ತೊರೆದು, ಪಾಂಡಿತ್ಯ ಪ್ರಕಾಶದ ಪ್ರಯತ್ನವನ್ನೂ ತೊರೆದು ಮಾಯೆಯ ಆವರಣವನ್ನು ದೂರ ಸರಿಸು.'

ಮರುದಿನ ಅವರು 'ಶಿಶುದೇರ್ ರಾಮಕೃಷ್ಣ' (ಕನ್ನಡದಲ್ಲಿ 'ಮಕ್ಕಳ ರಾಮಕೃಷ್ಣ') ಪುಸ್ತಕವನ್ನು ಓದುತ್ತ ಕಾಮಾರಪುಕುರದಲ್ಲಿ ಠಾಕೂರರ ಸಮಾಧಿಯ ಚಿತ್ರವನ್ನು ನೋಡುತ್ತಿದ್ದರು. ನಂತರ ಬಿಚ್ಚು ನಗುವಿನೊಂದಿಗೆ ಹೇಳಿದರು: ''ನೋಡು, ಕಾಮಾರಪುಕುರದಲ್ಲಿ ನಾನೂ ಕೂಡ ಮೋಡ ಹಾಗೂ ಬಕಪಕ್ಷಿಗಳನ್ನು ನೋಡಿರುವೆ. ಆದರೆ ಕೈಯಲ್ಲಿ ಕಡಲೆಪುರಿ ಇಲ್ಲದ್ದರಿಂದ ಸಮಾಧಿಯನ್ನು ಅನುಭವಿಸಲಿಲ್ಲ.''

ಅದರ ಮಾರನೆಯ ವರ್ಷ ಈ ಶಾಸ್ತ್ರಜ್ಞ ಸಾಧಕ ಸಾಧುಗಳು ಇಹಲೋಕವನ್ನು ತ್ಯಜಿಸಿ ಹೊರಟುಹೋದರು. ***(ಸಮಾಪ್ತಿ)***